

# ಯುಗಾಂತ್ಯದ ನಂತರ...

‘ಉರ್ವಿ’ ಸಿನಿಮಾದ ಮೂಲಕ ಗುರ್ತಿಸಿಕೊಂಡಿದ್ದ ಪ್ರದೀಪ್ ವರ್ಮ ತಮ್ಮ ವೃತ್ತಿಜೀವನದಲ್ಲಿ ಹಿರಿದಾದ ಹೆಜ್ಜೆಯೊಂದನ್ನು ಇಟ್ಟಿದ್ದಾರೆ. ಮನುಷ್ಯಕುಲದ ಅಂತ್ಯದ ನಂತರದ ಜಗತ್ತನ್ನು ತೆರೆಯ ಮೇಲೆ ತೋರಿಸುವ ಹೆಬ್ಬಯಕೆ ಇರಿಸಿಕೊಂಡು ‘ದ ಫಾಲನ್’ ಸಿನಿಮಾ ಮಾಡಿರುವ ಅವರು, ಸೃಷ್ಟಿಚಕ್ರದ ಕುರಿತು ಮೂಲಭೂತ ಪ್ರಶ್ನೆಗಳಿಗೆ ಮುಖಾಮುಖಿಯಾಗುವ ಪ್ರಯತ್ನವನ್ನು ಮಾಡಿದ್ದಾರಂತೆ.

■ ಪದ್ಮನಾಭ ಭಟ್



ಸೃಷ್ಟಿ ಎನ್ನುವುದು ಒಂದು ಚಕ್ರ. ಅದು ತಿರುಗುತ್ತಲೇ ಇರುತ್ತದೆ. ಇಂದು ಎತ್ತರದಲ್ಲಿದ್ದಿದ್ದು ಮುಂದೆ ತಳಕ್ಕಿಳಿಯುತ್ತದೆ. ತಳದಲ್ಲಿದ್ದಿದ್ದು ಮೇಲೇರುತ್ತದೆ. ಪ್ರಳಯದ ಕಲ್ಪನೆಯನ್ನೂ ಈ ಸೃಷ್ಟಿಚಕ್ರದ ಭಾಗವಾಗಿಯೇ ನೋಡಲಾಗಿದೆ. ಹಾಗಾದರೆ ಈಗ ಇಷ್ಟೆಲ್ಲ ಮುಂದುವರಿದಿರುವ, ತಂತ್ರಜ್ಞಾನದಿಂದ ಹೊಸ ಲೋಕವನ್ನೇ ಸೃಷ್ಟಿಸಿಕೊಂಡಿರುವ ಮನುಷ್ಯಕುಲ ಮುಂದೊಮ್ಮೆ ನಶಿಸಿಹೋಗುತ್ತದೆಯಾ? ನಶಿಸಿದ ಮೇಲೆ ಮತ್ತೆ ಮನುಕುಲ ತನ್ನ ಮೂಲಕ್ಕೆ ಅಂದರೆ ಆದಿಮಾನವನ ಕಾಲಕ್ಕೆ ಮರಳುತ್ತದೆಯೇ? ಅದೊಂದು ವೇಳೆ ನಿಜವಾದರೆ ಆ ಕಾಲ ಹೇಗಿರುತ್ತದೆ?

ಈ ಎಲ್ಲ ಪ್ರಶ್ನೆಗಳಿಗೆ ತಮ್ಮ ಕಲ್ಪನಾಲೋಕದಲ್ಲಿಯೇ ಉತ್ತರ ಕಂಡುಕೊಂಡಿರುವ ನಿರ್ದೇಶಕ ಪ್ರದೀಪ್ ವರ್ಮ, ಆ ಕಲ್ಪನಾಲೋಕಕ್ಕೀಗ ಸಿನಿಮಾ ಫ್ರೇಮು ತೊಡಿಸಲು ಹೊರಟಿದ್ದಾರೆ.

ಮೂಲತಃ ಕಲಾವಿದರಾಗಿರುವ ಪ್ರದೀಪ್, ‘ಊರ್ವಿ’ ಎಂಬ ಸಿನಿಮಾ ನಿರ್ದೇಶಿಸಿ ಗಮನಸೆಳೆದಿದ್ದರು. ನಂತರ ‘ಬ್ರಾಹ್ಮಿ’ ಎಂಬ ಇನ್ನೊಂದು ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದರೂ, ಚಿತ್ರತಂಡದೊಂದಿಗೆ ಮನಸ್ತಾಪವಾಗಿ ಆ ತಂಡದಿಂದ ಹೊರನಡೆದಿದ್ದಾರೆ.

ಈಗ ತಮ್ಮ ಹೊಸ ಪ್ರಯೋಗದ ಮೂಲಕ ದೇಶದ ಗಮನಸೆಳೆಯಲು ಯತ್ನಿಸುತ್ತಿರುವ ಪ್ರದೀಪ್, ಜಾಗತಿಕ ವಸ್ತುವನ್ನು ಇಟ್ಟುಕೊಂಡು ಸಿನಿಮಾ ಕಟ್ಟುತ್ತಿದ್ದಾರೆ. ಆ ಚಿತ್ರದ ಹೆಸರು ‘ದ ಫಾಲನ್’.

‘ಇಂದಿನ ತಂತ್ರಜ್ಞಾನ ಯುಗದ ಅಂತ್ಯದ ನಂತರದ ಕಾಲ ಹೇಗಿರುತ್ತದೆ ಎಂಬುದನ್ನು ಕಲ್ಪಿಸಿಕೊಂಡು ಕಟ್ಟಿದ ಕಥೆ ಇದು. ಇಡೀ ಜಗತ್ತಿನಲ್ಲಿಯೇ ನಾಲ್ಕೈದು ಜನರು ಉಳಿದುಕೊಂಡಿರುತ್ತಾರೆ. ಅವರು ನಾಗರಿಕತೆಗಾಗಿ ಹೇಗೆ ಪರಿತಪಿಸುತ್ತಾರೆ ಎಂಬ ಎಳೆಯನ್ನು ಇಟ್ಟುಕೊಂಡು ಸಿನಿಮಾ ಮಾಡಿದ್ದೇನೆ’ ಎಂದು ಪ್ರದೀಪ್ ವಿವರಿಸುತ್ತಾರೆ.

ಈ ಚಿತ್ರದ ಮೂಲಕ ಬಾಲಿವುಡ್‌ಗೂ ಲಗ್ಗೆ ಇಡುತ್ತಿರುವ ಪ್ರದೀಪ್, ಕನ್ನಡ ಭಾಷೆಯಲ್ಲಿಯೇ ಸಿನಿಮಾ ಮಾಡಬಹುದಿತ್ತಲ್ಲ ಎಂಬ ಪ್ರಶ್ನೆಗೆ ಉತ್ತರಿಸುವುದು ಹೀಗೆ: ‘ಈ ಚಿತ್ರದ ಕಥೆ ನಡೆಯುವ ಕಾಲದಲ್ಲಿ ಜಗತ್ತಿನ ಬಹುತೇಕ ಭಾಷೆಗಳು ಇಂಗಿಹೋಗಿರುತ್ತವೆ. ಹಲವು ಸಂಶೋಧನೆಗಳ ಪ್ರಕಾರ ಮುಂದೊಂದು ದಿನ ಚೈನೀಸ್ ಮತ್ತು ಇಂಗ್ಲಿಷ್ ಭಾಷೆಗಳು ಮಾತ್ರವೇ ಉಳಿದುಕೊಳ್ಳುತ್ತವೆ. ಹಿಂದಿಯೂ ಸ್ವಲ್ಪ ಉಳಿದುಕೊಂಡಿರುತ್ತದೆ. ಹೀಗಾಗಿ ಈ ಚಿತ್ರದಲ್ಲಿಯೂ ಆ ಕಾಲಕ್ಕೆ ತಕ್ಕ ಹಾಗೆಯೇ ಭಾಷೆಗಳನ್ನು ಬಳಸಿಕೊಂಡಿದ್ದೇವೆ. ಇದು ಬರೀ ಹಿಂದಿ ಭಾಷೆಯ ಸಿನಿಮಾ ಅಲ್ಲ. ಹಿಂದಿ, ಚೈನೀಸ್ ಮತ್ತು ಇಂಗ್ಲಿಷ್ ಭಾಷೆಗಳನ್ನು ಬಳಸಿಕೊಂಡು ಮಾಡಿದ ಜಾಗತಿಕ ವಸ್ತು ಇರುವ ಸಿನಿಮಾ’ ಎಂದು ಅವರು ತಮ್ಮ ಚಿತ್ರದ ಕ್ಯಾನ್ವಾಸ್‌ನ ವಿಸ್ತಾರದ ಕಡೆಗೆ ಗಮನಸೆಳೆಯುತ್ತಾರೆ.

ಸದ್ಯಕ್ಕೆ ಒಂದು ಹಂತದ ಶೂಟಿಂಗ್ ಮುಗಿಸಿಕೊಂಡು ಬಂದಿರುವ ಅವರು, ಮುಂದಿನ ಹಂತದ ಚಿತ್ರೀಕರಣವನ್ನು ಸಿಕ್ಕಿಂ ಮತ್ತು ಚೀನಾ ಗಡಿಯ ಪ್ರದೇಶಗಳಲ್ಲಿ ನಡೆಸಲು ಯೋಜಿಸಿದ್ದಾರೆ.

ಚಿತ್ರಕ್ಕೆ ‘ದ ಫಾಲನ್’ ಎಂದು ಹೆಸರಿಡಲು ಏನು ಕಾರಣ ಎನ್ನುವುದನ್ನೂ ವಿವರಿಸುವ ಅವರು, ‘ಮನುಷ್ಯ ಇದುವರೆಗೆ ತನ್ನ ಸುತ್ತಲಿನ ಜಗತ್ತನ್ನು ಹಾಳು ಮಾಡುತ್ತಲೇ ಬಂದಿದ್ದಾನೆ. ಈ ಹಾಳುಗೆಡಹುವಿಕೆಯ ಕೊನೆಯ ಹಂತ ಹೇಗಿರಬಹುದು? ಅಲ್ಲಿಯೇ ಹೊಸ ಆರಂಭವೂ ಇರಬಹುದೇ?’ ಎಂಬಿತ್ಯಾದಿ ಪ್ರಶ್ನೆಗಳನ್ನು ಇಟ್ಟುಕೊಂಡು ಈ ಸಿನಿಮಾ ಮಾಡಿದ್ದೇನೆ. ಇಂಥದ್ದೇ ಒಂದು ಪ್ರಶ್ನೆಯನ್ನು ಪ್ರೇಕ್ಷಕರ ಎದುರಿಗೆ ಇಟ್ಟು ಈ ಸಿನಿಮಾ ಕೊನೆಗೊಳ್ಳುತ್ತದೆ’ ಎಂಬುದು ಅವರ ವಿವರಣೆ.

ಅನುಪಮಾ ಗೌಡ ಈ ಚಿತ್ರದ ನಾಯಕಿ. ಅವರು ಪಾತ್ರಕ್ಕೆ ನಡೆಸಿದ ಸಿದ್ಧತೆ ಮತ್ತು ನಟನೆಯೆಡೆಗೆ ಅವರಿಗಿರುವ ಬದ್ಧತೆ ಎರಡನ್ನೂ ಪ್ರದೀಪ್ ಮನಸಾರೆ ಕೊಂಡಾಡುತ್ತಾರೆ. ಸತ್ಯ ಬಿ.ಜಿ. ಎನ್ನುವವರು ನಾಯಕ. ಮಯೂರಿ ನಟರಾಜ್ ಮತ್ತು ಭವಾನಿ ಪ್ರಕಾಶ್ ಕೂಡ ಮುಖ್ಯ ಪಾತ್ರಗಳಲ್ಲಿ ನಟಿಸಿದ್ದಾರೆ. ಇಡೀ ಚಿತ್ರದಲ್ಲಿ ನಾಲ್ಕೈದು ಪಾತ್ರಗಳು ಮಾತ್ರ ಇರುತ್ತವೆಯಂತೆ.

‘ರಾಮಾ ರಾಮಾ ರೇ’ ಸಿನಿಮಾ ನಾಯಕ ನಟರಾಜ್ ಈ ಚಿತ್ರಕ್ಕೆ ಸಹನಿರ್ದೇಶಕನಾಗಿ ಕೆಲಸ ಮಾಡಿರುವುದು ವಿಶೇಷ. ಆನಂದ್ ಸುಂದರೇಶ್ ಛಾಯಾಗ್ರಹಣ ಮತ್ತು ಅಪರಾಜಿತ್ ಅವರ ಸಂಗೀತ ಚಿತ್ರಕ್ಕಿದೆ. ಮುಂದಿನ ವರ್ಷ ಏಪ್ರಿಲ್‌ನಲ್ಲಿ ಚಿತ್ರವನ್ನು ತೆರೆಗೆ ತರುವ ಯೋಚನೆಯಲ್ಲಿ ನಿರ್ದೇಶಕರಿದ್ದಾರೆ. ■